**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**ಎಸ್.ಸಿ. ನಂಃ 10015/2019**

**ಚಾಸಾ ಃ 37**

**ಪ್ರಾಸಾ ಃ 13**

| | | |
|---|---|---|
| **ಹೆಸರು** | **ಃ** | **ಡಾ।। ರಾಧಾ ಎಸ್.** |
| **ತಂದೆಯ ಹೆಸರು** | **ಃ** | **ಶ್ರೀನೀವಾಸ** |
| **ವಯಸ್ಸು** | **ಃ** | **47 ವರ್ಷ** |
| **ವೃತ್ತಿ** | **ಃ** | **ಸಹಾಯಕ ನಿರ್ದೇಶಕರು, ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ ಮೈಸೂರು** |
| **ವಾಸ** | **ಃ** | **ಮೈಸೂರು.** |

**ಈ ದಿನ ದಿನಾಂಕಃ 01.04.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ನವೆಂಬರ್ 2011 ರಿಂದ ನಾನು ಮೈಸೂರಿನ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಹಿರಿಯ ವೈಜ್ಞಾನಿಕ ಅಧಿಕಾರಿ ಮತ್ತು ಸಹಾಯಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ 06.02.2019 ರಂದು ದೊಡ್ಡಬಳ್ಳಾಪುರ ನಗರ ಪೋಲೀಸು ಠಾಣೆಯ ಪೇದೆ 1566 ಶ್ರೀನಿವಾಸ ಎಸ್ ರವರು ಅವರ ಠಾಣಾ ಮೊಕದ್ದಮೆ ಸಂಖ್ಯೆ 2/2019 ಕ್ಕೆ ಸಂಬಂಧಪಟ್ಟಂತೆ ಈ ಕೆಳಕಂಡ 12 ವಸ್ತುಗಳನ್ನು ವಿಶ್ಲೇಷಣೆಗಾಗಿ ನೀಡಿರುತ್ತಾರೆ. ಸದರಿ ವಸ್ತುಗಳನ್ನು ನಮ್ಮ ಸ್ವಾಗತ ವಿಭಾಗದವರು ಸ್ವೀಕರಿಸಿ ಕಚೇರಿ ಸಂಖ್ಯೆ ಆರ್.ಎಫ್.ಎಸ್.ಎಲ್/ಬಿಎಸ್/112/2019 ನ್ನು ನೀಡಿ ನಮ್ಮ ಜೀವಶಾಸ್ತ್ರ ವಿಭಾಗಕ್ಕೆ

ಕಳುಹಿಸಿರುತ್ತಾರೆ. ನಮ್ಮ ಆಗಿನ ಸಹಾಯಕ ನಿರ್ದೇಕರಾಗಿದ್ದ ಡಾ।। ಚಂದ್ರಶೇಖರ್‌ರವರು ಸದರಿ ವಸ್ತುಗಳನ್ನು ವಿಶ್ಲೇಷಿಸಿ ವರದಿ ನೀಡುವಂತೆ ನಮಗೆ ನೀಡಿರುತ್ತಾರೆ. ಸದರಿ ವಸ್ತುಗಳನ್ನು ನಾನು ತೆಗೆದುಕೊಂಡು ನೋಡಲಾಗಿ ಅವುಗಳ ಮೇಲೀನ ಸೀಲು ಸುಸ್ಥಿಯಲ್ಲಿದ್ದು ತನಿಖಾಧಿಕಾರಿಗಳು ಕಳುಹಿಸಿದ ಮಾದರಿ ಸಹಿಯೊಂದಿಗೆ ಹೊಲಿಕೆಯಾಗಿ ಕಂಡುಬಂದಿರುತ್ತದೆ. ಸದರಿ ವಸ್ತುಗಳನ್ನು ಬಿಚ್ಚಿ ನೋಡಲಾಗಿ ವಸ್ತು ಸಂಖ್ಯೆ -

| | | | |
|---|---|---|---|
| 1. | ಜಲ್ಲಿ ಮಿಶ್ರಿತ ಮಣ್ಣು | 2. | ಮಾದರಿ ಮಣ್ಣು |
| 3. | ಒಂದು ಜರ್ಕೀನ್ | 4. | ಒಂದು ಶರ್ಟ್ |
| 5. | ಒಂದ ಕಾಚಾ | 6. | ಒಂದು ನೈಟಿ |
| 7. | ಖಾರದ ಪುಡಿ | 8. | ಒಂದು ಜೀನ್ಸ್ ಪ್ಯಾಂಟ್ |
| 9. | ಟೀ ಶರ್ಟ್ | 10. | ಒಂದು ಸ್ವೆಟರ್ |
| 11. | ನೈಟ್ ಪ್ಯಾಂಟ್ | 12. | ಒಂದು ಮಚ್ಚು |

ನನ್ನ ವರದಿಯಲ್ಲಿ ಕ್ರಮಸಂಖ್ಯೆ 6 ತಪ್ಪಾಗಿ ನೈಟಿ ಎಂದು ಬರೆದಿದ್ದು ಆದರೆ ಅದು ನೈಟ್ ಪ್ಯಾಂಟ್ ಆಗಿರುತ್ತದೆ.

3. ನಾನು ಸದರಿ ವಸ್ತುಗಳನ್ನು ರಾಸಾಯನಿಕ ಮತ್ತು ಸಿರಾನಿಕಲ್ ಪರೀಕ್ಷೆಗೆ ಒಳಪಡಿಸಿರುತ್ತೇನೆ. ನನ್ನ ಪರೀಕ್ಷಾ ಫಲಿತಾಂಶದಂತೆ ವಸ್ತುಸಂಖ್ಯೆ 1, 3 ರಿಂದ 12 ರ ವಸ್ತುಗಳ ಮೇಲೆ ರಕ್ತದ ಕಲೆಗಳು ಕಂಡುಬಂದಿದ್ದು ವಸ್ತು ಸಂಖ್ಯೆ 2 ರಲ್ಲಿ ಯಾವುದೇ ರಕ್ತದ ಕಲೆಗಳು ಕಂಡುಬಂದಿರುವುದಿಲ್ಲ. ವಸ್ತುಸಂಖ್ಯೆ 1, 3 ರಿಂದ 6 ಮತ್ತು 8 ರಿಂದ 12 ರ ವಸ್ತುಗಳ ಮೇಲೆ ಮನಷ್ಯನ ರಕ್ತದ ಕಲೆಗಳು ಇದ್ದು ವಸ್ತು ಸಂಖ್ಯೆ 1, 3 ರಿಂದ 6, 10, 11 ಮತ್ತು 12 ರ ವಸ್ತುಗಳ ಮೇಲಿನ ರಕ್ತದ ಕಲೆಗಳು ಮನುಷ್ಯರ 'ಎಬಿ' ಗುಂಪಿಗೆ ಸೇರಿರುತ್ತದೆಂಬುದು ಮತ್ತು

ವಸ್ತು ಸಂಖ್ಯೆ 8 ಮತ್ತ 9 ರ ವಸ್ತುಗಳ ಮೇಲಿನ ರಕ್ತದ ಕಲೆಗಳು ಮನುಷ್ಯರ ಎ ಗುಂಪಿಗೆ ಸೇರಿರುತ್ತದೆಂಬುದು ಕಂಡುಬಂದಿರುತ್ತದೆ. ವಸ್ತು ಸಂಖ್ಯೆ 7 ರಲ್ಲಿನ ರಕ್ತವು ಸಾಕಷ್ಟು ಪ್ರಮಾಣದಲ್ಲಿ ಇರದೇ ಇರುವುದರಿಂದ ಅದನ್ನು ನಿರ್ಣಯಿಸಲು ಸಾಧ್ಯವಾಗಿರುವುದಿಲ್ಲ.

4. ಇದಕ್ಕೆ ಸಂಬಂಧಪಟ್ಟಂತೆ ನಾನು ನನ್ನ ಅಭಿಪ್ರಾಯದ ವರದಿಯನ್ನು ನೀಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-35 ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸುತ್ತೇನೆ. ಸಾಕ್ಷಿದಾರರು ತಮ್ಮ ಸಹಿಯನ್ನು ನೋಡಿ ಗುರುತಿಸಸಿದ್ದರಿಂದ ಅದನ್ನು ನಿಪಿ-35 (ಎ) ಎಂದು ಗುರುತಿಸಲಾಯಿತು. ತಮ್ಮ ಮೇಲಾ ಧಿಕಾರಿಗಳಾದ ಸಹಾಯಕ ನಿರ್ದೇಶಕರಾದ ಡಾ॥ ಚಂದ್ರಶೇಖರ್ ಅವರ ಮತ್ತ ಉಪನಿರ್ದೇಶಕರಾದ ಎಸ್‌ಕೆ. ಕೃಷ್ಣರಾಜ್ ಅವರ ಮೇಲ್‌ರುಜುವನ್ನು ನೋಡಿ ಗುರುತಿಸುತ್ತೇನೆ. ಅವುಗಳನ್ನು ನಿಪಿ-35 (ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು.

5. ಪರೀಕ್ಷಿಸಿದ ನಂತರ ಎಲ್ಲಾ ವಸ್ತುಗಳನ್ನು ಮರುಪ್ಯಾಕ್ ಮಾಡಿ ನಮ್ಮ ಕಚೇರಿಯ ಮೋಹರಿನೊಂದಿಗೆ ಸೀಲು ಮಾಡಿ ಸಂಬಂಧಿಸಿದ ಪೋಲೀಸರಿಗೆ ವಾಪಸ್ಸು ನೀಡಿರುತ್ತೇನೆ ನಾನು ಪರೀಕ್ಷಿಸಿದ ವಸ್ತುಗಳನ್ನು ಇಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ. 1 ರಿಂದ 12 ಎಂದು ಗುರುತಿಸಲಾಗಿರುತ್ತದೆ. ಅವುಗಳ ಮೇಲೆ ನನ್ನ ಸಹಿಯಿರು ಚೀಟಿಯನ್ನು ಅಂಟಿಸಿರುತ್ತೇನೆ. ಮಾದರಿ ಸಹಿಯನ್ನು ನೋಡಿ ಗುರುತಿಸುತ್ತೇನೆ. ಅದನ್ನು ನಿಪಿ-36 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ಸಹಿ ಇರುತ್ತದೆ ಮತ್ತು ವರ ದಿಯನ್ನು ನಮ್ಮ ಇಲಾಖಾ ಮುಖ್ಯಸ್ಥರ ಮೂಲಕ ಸಂಬಂಧಪಟ್ಟ ತನಿಖಾಧಿಕಾರಿಗಳಿಗೆ ಕಳುಹಿಸಿರುತ್ತೇನೆ.

**<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಟಿ.ಜಿ.ವಿ ವಕೀಲರಿಂದಃ</u>**

6. ಇಂದು ನ್ಯಾಯಾಲಯದಲ್ಲಿ ನೋಡುತ್ತಿರುವ ವಸ್ತುಗಳು ಮು.ಮಾ. 1 ರಿಂದ 12 ರಲ್ಲಿ ಕ್ರಮಸಂಖ್ಯೆ 6 ರ ನೈಟಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಬೆರಳಚ್ಚು ತಪ್ಪಿನಿಂದ ನೈಟ್ ಪ್ಯಾಂಟ ಎನ್ನುವ ಬದಲಾಗಿ ನೈಟಿ ಎಂದು ತಪ್ಪಾಗಿ ಬೆರಳಚ್ಚು ಆಗಿರುತ್ತದೆಂದು ಸ್ವತಃ ನುಡಿಯುತ್ತಾರೆ. ಆ ರೀತಿ ತಪ್ಪಾಗಿ ಬೆರಳಚ್ಚು ಆಗಿರತ್ತದೆಂಬ ವಿಚಾರವು ಇಂದು ನ್ಯಾಯಾಲಯದಲ್ಲಿ ಗೊತ್ತಾಗಿರುತ್ತದೆ. ಕ್ರಮಸಂಖ್ಯೆ 3 ರಿಂದ 5 ಮತ್ತು 12 ರ ವಸ್ತುಗಳ ಮೇಲಿನ ರಕ್ತದ ಕಲೆಗಳು ಮನುಷ್ಯನ ಎಬಿ ಗುಂಪಿಗೆ ಸೇರಿರುತ್ತದೆಂದು ತಿಳಿಸಿದ್ದು ಅದರ ಉಪಗುಂಪನ್ನು ತಿಳಿಸಿರುವುದಿಲ್ಲ ಎಂದರೆ ಒಣಗಿದ ರಕ್ತದಲ್ಲಿ ಕೇವಲ ಗುಂಪನ್ನು ನಿರ್ಣಯಿಸಲು ಸಾಧ್ಯವಿದ್ದು ಆದರೆ ಉಪಗುಂಪನ್ನು ನಿರ್ಧಿಷ್ಟವಾಗಿ ಗುರುತಿಸಲು ಸಾಧ್ಯವಿಲ್ಲ.

7. ವಸ್ತು ಸಂಖ್ಯೆ 3 ರಿಂದ 5 ಮತ್ತು 12 ರಲ್ಲಿ ವಸ್ತು ಸಂಖ್ಯೆ 8 ಮತ್ತು 9 ರ ಎ ಗುಂಪಿನ ರಕ್ತದ ಕಲೆಗಳು ಕಂಡುಬಂದಿದ್ದಲ್ಲಿ ಅದನ್ನು ತಿಳಿಸುತ್ತಿದ್ದೇವು ಎಂದರೆ ಸರಿ. ಕ್ರಮಸಂಖ್ಯೆ 8 ಮತ್ತು 9 ರ ವಸ್ತುಗಳ ಮೇಲಿನ ರಕ್ತದ ಕಲೆಗಳು ಮನುಷ್ಯನ 'ಎ' ಗುಂಪಿಗೆ ಸೇರಿರುತ್ತದೆಂದು ತಿಳಿಸಿದ್ದು ಅದರ ಉಪಗುಂಪನ್ನು ತಿಳಿಸಿರುವುದಿಲ್ಲ ಎಂದರೆ ಒಣಗಿದ ರಕ್ತದಲ್ಲಿ ಕೇವಲ ಗುಂಪನ್ನು ನಿರ್ಣಯಿಸಲು ಸಾಧ್ಯವಿದ್ದು ಆದರೆ ಉಪಗುಂಪನ್ನು ನಿರ್ಧಿಷ್ಟವಾಗಿ ಗುರುತಿಸಲು ಸಾಧ್ಯವಿಲ್ಲ. ಸರಿಯಾಗಿ ಪರೀಕ್ಷಿಸದೇ ನಾನು ಸುಳ್ಳು ವರದಿ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ